ಕನ್ನಡ ಸಂಭ್ರಮ ೮.೦

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮೀಜಿಗಳವರು, ಸುತ್ತೂರು ಶ್ರೀ ಕ್ಷೇತ್ರ ಸುತ್ತೂರು ಅವರ ಪಾದಾರವಿಂದಗಳಲಿ ಭಕ್ತಿ ಪೂರ್ವಕ ಪ್ರಣಾಮಗಳನ್ನು ಸಲಿಸುತ್ತಾ

ಜಿಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಮೈಸೂರು ಇವರ ಸಹಯೋಗದೊಂದಿಗೆ ಜೆಎಸ್ಎಸ್  ಔಷಧ ವಿಜ್ಞಾನ  ಮಹಾವಿದ್ಯಾಲಯ,ಮೈಸೂರು ಆವರಣದಲ್ಲಿ ನವೆಂಬರ್ 5 ಮತ್ತು 6ರಂದು ಆಚರಿಸಿದ ಕನ್ನಡ ಸಂಭ್ರಮ 2025ರ ವರದಿ ಈ ಕೆಳಗಿನಂತಿದೆ.

ದಿನಾಂಕ 05.11.2024 ಬುಧವಾರ ದಂದು ಬೆಳಿಗ್ಗೆ 10ಕ್ಕೆ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಹೆಮ್ಮೆಯ ಕನ್ನಡಿಗ ಕನ್ನಡತಿ ಸ್ಪರ್ಧೆಯನ್ನು ನಡೆಸಲಾಗಿತ್ತು. ಜೆಎಸ್ಎಸ್ ಕಾಲೇಜು ಆವರಣದೊಳಗೆ ಸಮಯ 3ಕ್ಕೆ ಬ್ಯಾನರ್ ಲಾಂಚ್ ಮಾಡುವ ಮೂಲಕ ಕಾಲೇಜಿನ ಸಂಪ್ರದಾಯದಂತೆ ನಡೆದು ಬಂದ ಕನ್ನಡ ಸಂಭ್ರಮಕ್ಕೆ ಚಾಲನೆ ನೀಡಲಾಯಿತು.ಈ ಉದ್ಘಾಟನೆಯ ನಂತರ ಸುತ್ತೂರು ಶಾಲೆಯ ವಿದ್ಯಾರ್ಥಿಗಳಿಂದ ಹಗ್ಗ ಯೋಗಾಸನದ ಪ್ರದರ್ಶನ ನೀಡಲಾಯಿತು. ಶ್ರೀ ದುಂಡಪ್ಪನವರು ಈ  ಹಗ್ಗ ಯೋಗಾಸನಕ್ಕೆ ತರಬೇತುದಾರರಾಗಿ ಅವರೂ ಕೂಡಾ ಹಾಜರಿದ್ದರು. ಹಗ್ಗ ಯೋಗಾಸವನ್ನು ವೀಕ್ಷಣೆ ಮಾಡಲು ಸಂಪೂರ್ಣ ಭೋದಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿಧ್ಯಾರ್ಥಿಗಳು ವೃಂದದವರು ನೆರೆದಿದ್ದರು.



ಕಾಲೇಜಿನ ಪ್ರತಿ ವಿಧ್ಯಾರ್ಥಿಯೂ ಪಾಲ್ಗೊಂಡು ಕನ್ನಡಾಂಬೆಗೆ ಪ್ರೀತಿಯಿಂದ, ಭಕ್ತಿಯಿಂದ ನಮಸ್ಕರಿಸಿದ ಸಂಭ್ರಮವದು. ಕಾಲೇಜು ಭೋಧಕ ಬೋಧಕೇತರ ವಿಧ್ಯಾರ್ಥಿಗಳು ಹಾಗೂ ಪ್ರತಿಯೊಬ್ಬರ ಮನಪೂರ್ವಕವಾಗಿ ಸಂಭ್ರಮಿಸಿದ ದಿನವಾಗಿತ್ತು. ಈ ಸಂಭ್ರಮದ ತಯಾರಿಯನ್ನು ತಿಂಗಳ ಪೂರ್ವದಲ್ಲಿಯೇ ಆಯೋಜಕರು ಹಾಗೂ ವಿದ್ಯಾರ್ಥಿಗಳಿಂದ ಪ್ರಾರಂಭಿಸಲಾಗಿತ್ತು.

6.11.2025 ಗುರುವಾರ ಬೆಳಿಗ್ಗೆ 9:00 ಗಂಟೆಗೆ ಕಾಲೇಜಿನ ಭೋಧಕ ಮತ್ತು ಬೋಧಕೇತರ ವೃಂದದವರು ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಮೇರವಣಿಗೆಗೆ ಚಾಲನೆ ನೀಡಿದರು. ವೀರಗಾಸೆ ಮತ್ತು ವಾದ್ಯ ತಂಡದವರ ಕಲೆ ಪ್ರದರ್ಶನ, ಹಳ್ಳಿಕಾರ್ ತಳಿಯ ಜೋಡೆತ್ತುಗಳು, ವಿಶೇಷ ತಳಿಯ ಕುರಿ ಮರಿ, ಕುದುರೆಯ ಹಾಜರಿ ಹಾಗೂ ಕಾಲೇಜು ವಿದ್ಯಾರ್ಥಿಗಳು, ಭೋದಕ/ಬೋಧಕೇತರ ವರ್ಗದವರು  ಸಂಭ್ರಮಿಸಿ ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿದರು. ಮೆರವಣಿಗೆಯ ನಂತರ ಕನ್ನಡ ಬಾಹುಟದ ಧ್ವಜಾರೋಹಣವನ್ನು ಮುಖ್ಯ ಅತಿಥಿಗಳಾದ ಡಾ||ಡಿ.ವಿ.ಗುರುಪ್ರಸಾದ್, ನಿವೃತ್ತ ಪೊಲೀಸ್ ಮಹಾನಿರ್ದೇಶಕರು ಹಾಗೂ ಖ್ಯಾತ ಲೇಖಕರು ನಡೆಸಿಕೊಟ್ಟರು, ಈ ಸಂಧರ್ಭದಲ್ಲಿ ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವರು, ಪರೀಕ್ಷಾ ನಿಯಂತ್ರಣಧಿಕಾರಿಗಳು, ಕಾಲೇಜಿನ ಪ್ರಾಂಶುಪಾಲರಾದ ಡಾ|| ಟಿ ಎಂ ಪ್ರಮೋದ್ ಕುಮಾರ್ ರವರು ಹಾಗೂ ಇತರ ಗಣ್ಯರು ಹಾಜರಿದ್ದರು ಧ್ವಜಾರೋಹಣದ ನಂತರ  ಕನ್ನಡ ಭುವನೇಶ್ವರಿಗೆ ಪೂಜೆ ಹಾಗೂ ಪುಷ್ಪಾರ್ಚನೆ ಮಾಡಲಾಯಿತು.



.

ಕನ್ನಡ ಸಂಭ್ರಮದ ೮.೦ ನ ಮುಖ್ಯ ಕಾರ್ಯಕ್ರಮವನ್ನು ಶ್ರೀ ರಾಜೇಂದ್ರ ಸಂಭಂಗಣದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ|| ಡಿ.ವಿ.ಗುರುಪ್ರಸಾದ್, ನಿವೃತ್ತ ಪೊಲೀಸ್ ಮಹಾನಿರ್ದೇಶಕರು ಹಾಗೂ ಖ್ಯಾತ ಲೇಖಕರು ಭಾಗವಹಿಸಿದ್ದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಬಿ ಮಂಜುನಾಥ, ಕುಲಸಚಿವರು, ಜೆಎಸಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ  ಡಾ|| ಆರ್ ಸುಧೀಂದ್ರ ಭಟ್ ಪರೀಕ್ಷಾ ನಿಯಂತ್ರಣಧಿಕಾರಿಗಳು, ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು ಹಾಗೂ ಡಾ||ಟಿ ಎಂ ಪ್ರಮೋದ್ ಕುಮಾರ್, ಪ್ರಾಂಶುಪಾಲರು, ಜೆಎಸ್ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ ಇವರುಗಳು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದರು.




ಕಾರ್ಯಕ್ರಮವನ್ನು ಕುಮಾರಿ ಇಂಪನ ಮತ್ತು ತಂಡದವರ ನಾಡಗೀತೆಯೊಂದಿಗೆ  ಆರಂಭಿಸಲಾಯಿತು, ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ  ಚಾಲನೆ ನೀಡಲಾಯಿತು. ಜ್ಯೋತಿ ಬೆಳಗುವುದರ ಸಮಯದಲ್ಲಿ ಕುಮಾರಿ ಇಂಪನ ಮತ್ತು ತಂಡದವರು ಹಚ್ಚೇವು ಕನ್ನಡದ ದೀಪ ಹಾಡನ್ನು ಹಾಡಲಾಯಿತು.   ಡಾ||ಶಾಸ್ತ್ರಾರ ಪಿ, ಸಹಾಯಕ ಅಧ್ಯಾಪಕರು ನರವಿಜ್ಞಾನ ವಿಭಾಗ, ಜೆಎಸ್ಎಸ್ ವೈದ್ಯಕೀಯ ಮಹಾವಿದ್ಯಾಲಯ ಇವರು ಕನ್ನಡ ನುಡಿ ನಮನಗಳನ್ನು ಅರ್ಪಿಸಿದರು. ದಿನಾಂಕ 5.11.2025 ರಂದು ನಡೆದ ಹೆಮ್ಮೆಯ ಕನ್ನಡಿಗ ಕನ್ನಡತಿ ಸ್ಪರ್ಧೆಯ ವಿಜೇತರುಗಳಿಗೆ ಮುಖ್ಯ ಅತಿಥಿಗಳಿಂದ ಪ್ರಶಸ್ತಿ ವಿತರಣೆ ಮಾಡಲಾಯಿತು.

ಕುಮಾರಿ ಅನನ್ಯ ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು, ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಅವರು ಬೆಳೆದು ಬಂದ ದಾರಿ ಹಾಗೂ ಅವರ ಜೀವನದ ವೈವಿಧ್ಯತೆಗಳನ್ನು ವಿವರಿಸಿದ್ದರು.

ಶ್ರೀಯುತರು ತಮ್ಮ ಭಾಷಣದಲ್ಲಿ ಕನ್ನಡ ಕನ್ನಡದ ಕಾಳಜಿ ಕನ್ನಡವನ್ನು ಪ್ರತಿಯೊಬ್ಬರು ಹೇಗೆ ಬಳಸಬೇಕೆಂಬುದನ್ನು ವಿದ್ಯಾರ್ಥಿಗಳಲ್ಲಿ ವಿನಂತಿಸಿದರು ಶ್ರೀಯುತರು ಎಲ್ಲಾ ವಿದ್ಯಾರ್ಥಿಗಳಲ್ಲಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಓದಬೇಕೆಂದು ಓದಿ ಉತ್ತಮ ನೌಕರಿ ಪಡೆದ ಸಮಾಜಮುಖಿಯಾಗಿ ಶ್ರಮ ವಹಿಸಬೇಕೆಂದು ಕೇಳಿಕೊಂಡರು ಶ್ರೀಯುತರಿಗೆ ಕನ್ನಡ ಬಳಗದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಗೌರವಾನ್ವಿತ ಡಾ||ಸುಧೀಂದ್ರ ಭಟ್, ಪರೀಕ್ಷಾ ನಿಯಂತ್ರಣಧಿಕಾರಿಗಳು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು ಇವರು ಕನ್ನಡದ ಬಗ್ಗೆ ಮಾತನಾಡಿ ಕುವೆಂಪುರವರು ರಚಿಸಿರುವ ಎಲ್ಲಾದರೂ ಇರು ಎಂತಾದರು ಇರು ಹಾಡನ್ನು ಹಾಡಿ ಸಭಿಕರನ್ನು ರಂಜಿಸಿದರು ಸಭೆಯ ಅಧ್ಯಕ್ಷತೆಯನ್ನು ಡಾ|| ಬಿ ಮಂಜುನಾಥ, ಕುಲಸಚಿವರು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಇವರು ಎಲ್ಲರಲ್ಲೂ ಕನ್ನಡ ಅಭಿಮಾನವನ್ನು ಬಳಸಿ ಪ್ರತಿಯೊಬ್ಬರು ತಮ್ಮ ಕನ್ನಡೇತರ ಸಹಪಾಠಿಗಳಿಗೆ ಕನ್ನಡವನ್ನು ಕಲಿಸಲು ಕೇಳಿಕೊಂಡರು. ಈ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಆಡಳಿತಗಾರರು ಹಾಗೂ




ನೌಕರರು, ಜೆಎಸ್‌ಎಸ್ ಅಂಗ ಸಂಸ್ಥೆಗಳ ಪ್ರಾಂಶುಪಾಲರು, ಉಪ ಪ್ರಾಂಶುಪಾಲರುಗಳು ಆಡಳಿತಾಧಿಕಾರಿಗಳು, ಉಪ ಆಡಳಿತ ಅಧಿಕಾರಿಗಳು, ಬೋಧಕರು, ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಕುಮಾರಿ ಇಂಚರ ಮತ್ತು ಕುಮಾರಿ ಅನುಷಾ ರವರು ನಡೆಸಿಕೊಟ್ಟರು ಕಾರ್ಯಕ್ರಮದ, ಸ್ವಾಗತವನ್ನು ಕುಮಾರಿ ಸ್ಫೂರ್ತಿರವರು ನಡೆಸಿಕೊಟ್ಟರು, ಹಾಗೂ ವಂದನಾರ್ಪಣೆಯನ್ನು ಕುಮಾರಿ ಮೋನಿಕಾ ರವರು ನಡೆಸಿಕೊಟ್ಟರು.

ಈ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಜೆ 6:00 ವರೆಗೆ ನಡೆಸಿಕೊಡಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸದೆ ಎಲ್ಲರಿಗೂ ಮಧ್ಯಾಹ್ನ ಬಾರಿ ಭೋಜನವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉಸ್ತುವಾರಿಯನ್ನು ಜೆಎಸ್‌ಎಸ್ ಔಷಧ ಮಹಾ ವಿಜ್ಞಾನಿ ಮಹಾವಿದ್ಯಾಲಯದ ಕನ್ನಡ ಸಂಭ್ರಮ ಬಳಗದವರು ನಡೆಸಿಕೊಟ್ಟರು.